Ref.No. 54/2023

WW-1,

ದಿನಾಂಕಃ 17-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು ಅಧ್ಯಕ್ಷನಾದ ನಂತರ ನಡೆದಂತಹ ಘಟನೆಗಳ ಬಗ್ಗೆ ಹಾಗೂ ನಾನು ಅಧ್ಯಕ್ಷನಾಗುವ ಮೊದಲು ನಡೆದಂತಹ ಘಟನೆಗಳ ಬಗ್ಗೆ ಎಷ್ಟು ಅರಿವಿದೆಯೋ ಆ ಬಗ್ಗೆ ಸಾಕ್ಷ್ಯ ನುಡಿಯುತ್ತಿದ್ದೇನೆ. 1 ನೇ ಪಾರ್ಟಿ ಯೂನಿಯನ್ 2015-16 ಕ್ಕೆ ಸಂಬಂದಿಸಿದಂತೆ ಬೋನಸ್ ಅನ್ನು ಕೇಳಿದ್ದರ ಬಗ್ಗೆ ನನಗೆ ಗೊತ್ತಿರುತ್ತದೆ. ಆ ಬಗ್ಗೆ ರೆಪರೆನ್ಸ್ 4/2018 ದಾಖಲಾಗಿತ್ತು ಎಂದರೆ ಸರಿ . ಸದರಿ ರೆಫರೆನ್ಸ್ ರಿಜೆಕ್ಟ್ ಆಗಿದ್ದರ ಬಗ್ಗೆ ನನಗೆ ಗೊತ್ತಿರುತ್ತದೆ. ಅದೇ ರೀತಿ 1 ನೇ ಪಾರ್ಟಿ ಯೂನಿಯನ್ 2016-17 ಕ್ಕೆ ಸಂಬಂದಿಸಿದಂತೆ ಬೋನಸ್ ಅನ್ನು ಕೇಳಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ರೆಪರೆನ್ಸ್ 31/2019 ದಾಖಲಾಗಿ ಅದೂ ಕೂಡ ರಿಜೆಕ್ಟ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲಾತಿಗಳ ಬಗ್ಗೆ ನನಗೆ ಅರಿವು ಇರುತ್ತದೆ. ಈ ಪ್ರಕರಣ ದಲ್ಲಿ ಉಮೇಶ್ ಸಿರಿಯಲ್ ನಂ. 14 ಮತ್ತು ಮಲ್ಲಿಕಾರ್ಜುನ್ ಸಿರಿಯಲ್ ನಂ. 18 ಇವರಿಬ್ಬರೂ 2 ನೇ ಪಾರ್ಟಿಯವರೊಂದಿಗೆ joint memo ವನ್ನು ಸಲ್ಲಿಸಿ ತಮ್ಮ ಕ್ಲೇಮ್ ಅನ್ನು ಕ್ಲೋಸ್ ಮಾಡಿಕೊಂಡಿದ್ದು ಈ ಪ್ರಕರಣದ ವ್ಯಾಪ್ತಿಯ ಅಡಿಯಲ್ಲಿ ಇರುವುದಿಲ್ಲ ಎಂದರೆ ಸರಿ .

ನಿ ಡಬ್ಲ್ಯೂ-2 ಲೇಬರ್ ಆಫೀಸರ್ ನೀಡಿದಂತಹ ನೋಟೀಸ್ ಆಗಿದ್ದು ಅದರಲ್ಲಿ 12 ವರ್ಷದಿಂದ ಬೋನಸ್ ಕಾಯಿದೆ ಅಡಿಯಲ್ಲಿ ಬೊನಸ್ ನೀಡಿರುವುದಿಲ್ಲ ಎಂದು ದೂರನ್ನು ಸಲ್ಲಿಸಿದ ಬಗ್ಗೆ ನಮೂದಿಸಲಾಗಿರುತ್ತದೆ ಎಂದರೆ ಸರಿ . ಲೇಬರ್ ಆಫೀಸರ್ ಸದರಿ ದೂರಿಗೆ ಸಂಬಂಧಸಿದಂತೆ Deputy Labour Commissioner conciliator ಆಗಿದ್ದು ಅವರ ಮುಂದೆ ಹೋಗುವಂತೆ ಸೂಚಿಸಿದ್ದರು ಎಂದರೆ ಸರಿ . ಅದೇ ರೀತಿ Deputy Labour Commissioner ನಮ್ಮನ್ನು ಸಂಧಾನ ಸಭೆಗೆ ಕರೆದಿರುತ್ತಾರೆ ಎಂದರೆ ಸರಿ . ನಿ ಡಬ್ಲ್ಯೂ-8 ರಂತೆ ನಾವು Deputy Labour Commissioner ಗೆ ಒಂದು ಅರ್ಜಿಯನ್ನು ಸಲ್ಲಿಸಿ ವಿವಾದವನ್ನು ನ್ಯಾಯಾಲಯ ಕ್ಕೆ ಕಳುಹಿದರೆ ಅವರೆ ಇತ್ಯರ್ಥ ಮಾಡುವಂತೆ ಕೇಳಿಕೊಂಡಿರುತ್ತೇವೆ ಎಂದರೆ ಸರಿ . ನಿ ಡಬ್ಲ್ಯೂ-10 ರಲ್ಲಿ ಮಾಡಿದಂತಹ ಕ್ಲೇಮ್ ಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಡಿ ಎಲ್ ಸಿ ಯವರಿಗೆ ಕೊಟ್ಟಿಲ್ಲ ಎಂದರೆ ಸರಿ . ನಿ ಡಬ್ಲ್ಯೂ-12 ರಂತೆ ಯೂನಿಯನ್ ರವರು ನನಗೆ ಡಿ ಎಲ್ ಸಿ ಯವರ ಮುಂದೆ ಕ್ಲೇಮ್ ಹಾಕಲು ಅಧಿಕಾರ ನೀಡಿರುತ್ತಾರೆ ಎಂದರೆ ಸರಿ . ನಿ ಡಬ್ಲ್ಯೂ-12 ರಲ್ಲಿ 12, 24, 26, 27, 28, 30 , 37, 38, 39, 43, 45, 66 ,67, 68, 71, 72, 73, 83 , 84, 103 ,107 ಕ್ರಮ ಸಂಖ್ಯೆಯಲ್ಲಿ ಇರುವ ಕೆಲಸಗಾರರು ಅಧಿಕಾರ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ .

ಆದುದರಿಂದ ಸದರಿ ಕೆಲಸಗಾರರನ್ನು ಪ್ರತಿನಿಧಿಸುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಸದರಿಯವರು ನಮ್ಮ ಯೂನಿಯನ್ ನ ಸದಸ್ಯರಾಗಿರುತ್ತಾರೆ ಎಂದು ನುಡಿಯುತ್ತಾರೆ . ಕೆಲಸಗಾರರ ಅನುಮತಿಯಿಲ್ಲದೆ ಕೇವಲ ಯೂನಿಯನ್ ಸದಸ್ಯರಾಗಿರುವುದರಿಂದ ಅವರನ್ನು ಪ್ರತಿನಿಧಿಸುವ ಅಧಿಕಾರ ಯುನಿಯನ್ ಗೆ ಇರುತ್ತದೆ ಎಂದು ಬೈ ಲಾ ನಲ್ಲಿ ನಮೂದಿಸಿರುವುದಿಲ್ಲ ಅದು ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸರ್ವ ಸದಸ್ಯರ ಸಭೆ ತೀರ್ಮಾನವನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆ ರೀತಿ ತೀರ್ಮಾನ ಇಲ್ಲದ ಪಕ್ಷದಲ್ಲಿ ಸದರಿ ಸದಸ್ಯರನ್ನು ಪ್ರತಿನಿಧಿಸುವ ಅಧಿಕಾರ ನನಗೆ ಇರುವುದಿಲ್ಲ ಎಂದು ಪರಿಗಣಿಸಬಹುದು.

ಈ ಪ್ರಕರಣದ order of reference ನಲ್ಲಿ ಯಾವ ಅವಧಿಯಿಂದ ಯಾವ ಅವಧಿಯವರೆಗೆ ಬೋನಸ್ ಕೇಳಲಾಗುತ್ತಿದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ . ನಾವು ಡಿ ಎಲ್ ಸಿ ಯವರ ಮುಂದೆ ಹಾಕಿದ workers calculation statement ಅನ್ನು ಸರ್ಕಾರವು ರೆಫರೆನ್ಸ್ ಮಾಡುವ ಕಾಲಕ್ಕೆ ಯಥಾವತ್ತಾಗಿ ಅನುಬಂಧ ಎಂದು ನಮೂದಿಸಿ ಕಳುಹಿಸಿರುತ್ತದೆ ಎಂದರೆ ಸರಿ . ಡಿ ಎಲ್ ಸಿ ಯವರ ಮುಂದೆ ಸದರಿ ಸ್ಟೇಟ್ ಮೆಂಟ್ ಗೆ ಪೂರಕವಾಗಿ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸರಿ . ನಿ ಡಬ್ಲ್ಯೂ– 18 apprentice ಗೆ ಸಬಂದಪಟ್ಟಿದ್ದು ಬೊನಸ್ ಆಕ್ಟ್ ಗೆ ಸಂಬಂದಪಟ್ಟಿಲ್ಲ ಎಂದರೆ ಸರಿ . ಈ ಪ್ರಕರಣ ದಲ್ಲಿ ಹಾಕಿರುವಂತಹ ಕ್ಲೇಮ್ ಸ್ಟೇಟ್ ಮೆಂಟ್ order of reference ಪೂರಕವಾಗಿರುವುದಿಲ್ಲ ಎಂದರೆ ಸರಿಯಲ್ಲ . ಕ್ಲೇಮ್ ಅರ್ಜಿಯಲ್ಲಿ ಪ್ಯಾರಾ 14 ರಿಂದ 17 ರವರೆಗೆ ಹೇಳಿದಂತಹ ಮಾಹಿತಿ order of reference ಇರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಕ್ಲೇಮ್ ಅರ್ಜಿಯಲ್ಲಿ ವಿವರವಾಗಿದ್ದು order of reference ನಲ್ಲಿ ಸಂಕ್ಷಿಪ್ತವಾಗಿರುತ್ತದೆ ಎಂದು ನುಡಿಯುತ್ತಾರೆ . order of reference ನಲ್ಲಿ ಯಾವ ಯಾವ ಕೆಲಸಗಾರರಿಗೆ ಯಾವ ಯಾವಾ ವರ್ಷಕ್ಕೆ ಎಷ್ಟು ಬೋನಸ್ ಬರಬೇಕೆಂದು ನಮೂದಾಗದೇ ಇದ್ದದ್ದರಿಂದ ಅದು ಕ್ಲೇಮ್ ಅರ್ಜಿಯೊಂದಿಗೆ ಪೂರಕವಾಗಿರುವುದಿಲ್ಲ ಎಂದರೆ ಸರಿಯಲ್ಲ . ಯೂನಿಯನ್ ಇಂದ ಕಾರ್ಮಿಕರಿಗೆ ಸೌಲಭ್ಯ ಒದಗಿದ್ದಲ್ಲಿ ಮಾತ್ರ ಅವರು ಯೂನಿಯನ್ ಸದಸ್ಯರಾಗಿ ಉಳಿಯುತ್ತಾರೆ ಎಂದರೆ ಸರಿಯಲ್ಲ . ಕಾರ್ಮಿಕರಿಗೆ ಹೆಚ್ಚಿನ ಬೋನಸ್ ಅನ್ನು ಕೊಡಿಸುವುದಾಗಿ ಆಸೆಯನ್ನು ತೋರಿಸಿ ನಮ್ಮ ಯುನಿಯನ್ ನ ಸದಸ್ಯರಾಗಿ ಉಳಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . order of reference ನಲ್ಲಿ 12 ವರ್ಷದಿಂದ ಬೊನಸ್ ಅನ್ನು ನೀಡಿರುವುದಿಲ್ಲ ಎಂದು ನಮೂದಾಗಿರುತ್ತದೆ ಆದರೆ ಕ್ಲೇಮ್ ಅರ್ಜಿಯಲ್ಲಿ ಬೋನಸ್ ನ ವ್ಯತ್ಯಾಸದ ಹಣ ನೀಡಿರುವುದಿಲ್ಲ ಎಂದು ನಮೂದಿಸಿರುತ್ತೇವೆ ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು order of reference ನಲ್ಲಿ ಅದನ್ನು ಸ್ಪಷ್ಟವಾಗಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಆದುದರಿಂದ order of reference ಅಸ್ಪಷ್ಟವಾಗಿರುತ್ತದೆ ಎಂದರೆ ಸರಿಯಲ್ಲ . ನಾವು ಕೇಳಿದಂತೆ ಯಾವುದೇ ಬೋನಸ್ ನ್ನು ಆಡಳಿತ ವರ್ಗದವರು ನೀಡಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ – ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.